ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01.

ಸಂಖ್ಯೆ:ಡಿಎಸ್‌ಇಆರ್‌ಟಿ/ಇವಿಜಿ/1-10/ಮೌಲ್ಯಾಂಕನ/2021-22. ದಿನಾಂಕ:11/08/2021.

**~ ಃ ಸುತ್ತೋಲೆ ಃ ~**

ವಿಷಯ:2021-22ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ 1 ನೇ ತರಗತಿಯಿಂದ 10ನೇ ತರಗತಿ ವಿದ್ಯಾರ್ಥಿಗಳ ಮೌಲ್ಯಾಂಕನ ನಡೆಸುವ ಬಗ್ಗೆ~

ಉಲ್ಲೇಖ:1.ದಿನಾಂಕ:08/06/2021ರಂದು ನಡೆಸಲಾದ ಶಾಲಾ ಸಿದ್ಧತಾ ಸಭೆಯಲ್ಲಿ ನೀಡಲಾದ ಸೂಚನೆ ಮೇರೆಗೆ.

2.ಆಯುಕ್ತರ ಕಛೇರಿ ಸುತ್ತೋಲೆ ಸಂಖ್ಯೆ:ಎಡಿಎಂ2(1)/ಶೈವನಿ/01/2021-22. ದಿನಾಂಕ:04/06/2021.

3.ಆಯುಕ್ತರ ಕಛೇರಿ ಸುತ್ತೋಲೆ ಸಂಖ್ಯೆ:ಎಡಿಎಂ2(1)/ಶೈವನಿ/01/2021-22. ದಿನಾಂಕ:10/06/2021.

*****

2021-22ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19ರ ಪರಿಣಾಮವಾಗಿ ಶೈಕ್ಷಣಿಕ ಅವಧಿ ಬದಲಾದ ಹಿನ್ನೆಲೆಯಲ್ಲಿ ಲಭ್ಯ ಅವಧಿಯಲ್ಲಿ ನಿರ್ವಹಿಸಬೇಕಾದ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಬಗ್ಗೆ ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಉದ್ದೇಶದಿಂದ ಈ ಕೆಳಗಿನ ಅಂಶಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ನೀಡಲಾಗಿದೆ.

ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೋಧನಾ ಕಲಿಕಾ ಪ್ರಕ್ರಿಯೆಯು ವಿವಿಧ ಹಂತದಲ್ಲಿ ಆಫ್‌ಲೈನ್ ಅಥವಾ ಆನ್‌ಲೈನ್ / ಪರ್ಯಾಯ ಶಿಕ್ಷಣ ಕಾರ್ಯಕ್ರಮಗಳ ಮುಖೇನ ಬೋಧನೆ/ಮಾರ್ಗದರ್ಶನ ನೀಡಬೇಕಾಗಿದೆ. 01/07/2021 ರಿಂದ ಶೈಕ್ಷಣಿಕ ವರ್ಷವು ಪ್ರಾರಂಭವಾಗುತ್ತಿದೆ. ಮಕ್ಕಳ ಕಲಿಕೆಯ ಕೊರತೆಯನ್ನು ಪತ್ತೆ ಮಾಡಿ ಮುಂದಿನ ತರಗತಿಗೆ ಸಜ್ಜುಗೊಳಿಸಲು ಆರಂಭದಲ್ಲಿ ಸೇತುಬಂಧ ಕಾರ್ಯಕ್ರಮ ನಡೆಸುವುದು. ಉಲ್ಲೇಖ 2 & 3 ರಲ್ಲಿ ತಿಳಿಸಿದಂತೆ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಪಾಠ ಹಂಚಿಕೆ ಮಾಡಿಕೊಂಡು ಮಕ್ಕಳ ಕಲಿಕೆಯನ್ನು ಅನುಕೂಲಿಸುತ್ತಾ ಶಾಲಾಧಾರಿತ ಮೌಲ್ಯಾಂಕನ (ಸಿಸಿಇ) ಕೈಗೊಂಡು ಮಕ್ಕಳ ಕಲಿಕೆಯನ್ನು ದಾಖಲಿಸಿಕೊಳ್ಳಬೇಕಿದೆ.

ಪ್ರಸಕ್ತ ತಲೆದೋರಿರುವ ಕೋವಿಡ್-19ರ ಪ್ರತಿಕೂಲ ಸನ್ನಿವೇಶ ಮುಂದುವರೆಯುವ ಸಾಧ್ಯತೆಯನ್ನು ಗಮನದಲ್ಲಿ ಇಟ್ಟುಕೊಂಡು ಆನ್‌ಲೈನ್ ತರಗತಿಗಳು ಸೇರಿದಂತೆ ಪರ್ಯಾಯ ಮಾರ್ಗಗಳ ಮೂಲಕವೂ ಮಕ್ಕಳ ಕಲಿಕೆ ನಡೆಸಲು ವಾರ್ಷಿಕ ಕ್ರಿಯಾಯೋಜನೆಯನ್ನು ಶಿಕ್ಷಕರು ದಿನಾಂಕ:15/06/2021 ರಿಂದ ಅಗತ್ಯ ಪೂರ್ವ ತಯಾರಿಯೊಂದಿಗೆ ರೂಪಿಸಿಕೊಳ್ಳಲು ಈಗಾಗಲೇ ತಿಳಿಸಲಾಗಿದೆ.

2021-2022 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಮೌಲ್ಯಾಂಕನ ನಿರ್ವಹಿಸಬೇಕಾದ ವೇಳಾಪಟ್ಟಿಯು ಈ ಮುಂದಿನಂತಿದೆ. ಸದರೀ ಸಾಲಿಗೆ ಮಾತ್ರ ಅನ್ವಯಿಸುವಂತೆ 4 ರೂಪಣಾತ್ಮಕ ಮೌಲ್ಯಮಾಪನ ಹಾಗೂ 1 ಸಂಕಲನಾತ್ಮಕ ಮೌಲ್ಯಮಾಪನ ನಡೆಸುವಂತೆ ಸೂಚಿಸಿದೆ.

**1 ರಿಂದ 8ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆಯ ವೇಳಾಪಟ್ಟಿ:**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| ಸೇತುಬಂಧ ಶಿಕ್ಷಣ | - | ಜುಲೈ 2021 (ಪೂರ್ಣ ತಿಂಗಳು) |
| ರೂಪಣಾತ್ಮಕ ಮೌಲ್ಯಮಾಪನ - 1 (ಈ ಅವಧಿಯಲ್ಲಿ ನಿರ್ವಹಿಸಿದ ಅಭ್ಯಾಸ ಹಾಳೆಗಳು, ಗೃಹಪಾಠಗಳು, ಸ್ವಕಲಿಕಾ ಚಟುವಟಿಕೆಗಳು, ಹಾಗೂ ಇತರೆ ಚಟುವಟಿಕೆಗಳ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿಗಣಿಸುವುದು) (ಕ್ರೋಢೀಕರಣ) | 15 | 06/09/2021 ರಿಂದ 08/09/2021 |
| ರೂಪಣಾತ್ಮಕ ಮೌಲ್ಯಮಾಪನ - 2 (ಈ ಅವಧಿಯಲ್ಲಿ ನಿರ್ವಹಿಸಿದ ಅಭ್ಯಾಸ ಹಾಳೆಗಳು, ಗೃಹಪಾಠಗಳು, ಸ್ವಕಲಿಕಾ ಚಟುವಟಿಕೆಗಳು, ಹಾಗೂ ಇತರೆ ಚಟುವಟಿಕೆಗಳ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿಗಣಿಸುವುದು) (ಕ್ರೋಢೀಕರಣ) | 15 | 28/10/2021 ರಿಂದ 30/10/2021 |
| ರೂಪಣಾತ್ಮಕ ಮೌಲ್ಯಮಾಪನ-3 (ಈ ಅವಧಿಯಲ್ಲಿ ನಿರ್ವಹಿಸಿದ ಅಭ್ಯಾಸ ಹಾಳೆಗಳು, ಗೃಹಪಾಠಗಳು, ಸ್ವಕಲಿಕಾ ಚಟುವಟಿಕೆಗಳು, | 15 | 13/12/2021 ರಿಂದ 15/12/2021 |

| | | |
|---|---|---|
| ಹಾಗೂ ಇತರೆ ಚಟುವಟಿಕೆಗಳ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿಗಣಿಸುವುದು) (ಕ್ರೋಢೀಕರಣ) | | |
| ರೂಪಣಾತ್ಮಕ ಮೌಲ್ಯಮಾಪನ-4 (ಈ ಅವಧಿಯಲ್ಲಿ ನಿರ್ವಹಿಸಿದ ಅಭ್ಯಾಸ ಹಾಳೆಗಳು, ಗೃಹಪಾಠಗಳು, ಸ್ವಕಲಿಕಾ ಚಟುವಟಿಕೆಗಳು, ಹಾಗೂ ಇತರೆ ಚಟುವಟಿಕೆಗಳ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿಗಣಿಸುವುದು) (ಕ್ರೋಢೀಕರಣ) | 15 | 27/01/2022 ರಿಂದ 29/01/2022 |
| **ಸಂಕಲನಾತ್ಮಕ ಮೌಲ್ಯಮಾಪನ**<br>**1 ರಿಂದ 5 ನೇ ತರಗತಿಗಳಿಗೆ:** 20 ಲಿಖಿತ + 20 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡೆಸಿ, ಇಂಗ್ಲೀಷ್ ಭಾಷೆಗೆ 10 ಲಿಖಿತ+30 ಮೌಖಿಕ=40 ಅಂಕಗಳಿಗೆ ಪರೀಕ್ಷೆ ನಡೆಸುವುದು<br>**6 ರಿಂದ 8ನೇ ತರಗತಿಗಳಿಗೆ:** 30 ಲಿಖಿತ + 10 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡೆಸುವುದು) | 40 | 11/04/2022 ರಿಂದ 20/04/2022 |
| ಫಲಿತಾಂಶ ಪ್ರಕಟಣೆ ಒಟ್ಟು | 100 ಅಂಕಗಳಿಗೆ | 1-8ನೇ ತರಗತಿಗಳಿಗೆ ದಿನಾಂಕ 29/04/2022 ರಂದು ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಡಿ ಫಲಿತಾಂಶ ಪ್ರಕಟಿಸುವುದು |

## 9 ಮತ್ತು 10ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆಯ ವೇಳಾಪಟ್ಟಿ:

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| ಸೇತುಬಂಧ ಶಿಕ್ಷಣ | - | ಜುಲೈ 2021 (ಪೂರ್ಣ ತಿಂಗಳು) |
| ರೂಪಣಾತ್ಮಕ ಮೌಲ್ಯಮಾಪನ - 1 (2 ಚಟುವಟಿಕೆ (15+15 ಅಂಕಗಳು) 1 ಪೆನ್-ಪೇಪರ್ ಟೆಸ್ಟ್ (20 ಅಂಕಗಳು) ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು) | | 06/09/2021 ರಿಂದ 08/09/2021 |
| ರೂಪಣಾತ್ಮಕ ಮೌಲ್ಯಮಾಪನ - 2 (2 ಚಟುವಟಿಕೆ (15+15 ಅಂಕಗಳು) 1 ಪೆನ್-ಪೇಪರ್ ಟೆಸ್ಟ್ (20 ಅಂಕಗಳು) ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು) | | 28/10/2021 ರಿಂದ 30/10/2021 |
| ರೂಪಣಾತ್ಮಕ ಮೌಲ್ಯಮಾಪನ-3 (2 ಚಟುವಟಿಕೆ (15+15 ಅಂಕಗಳು) 1 ಪೆನ್-ಪೇಪರ್ ಟೆಸ್ಟ್ (20 ಅಂಕಗಳು) ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು) | | 13/12/2021 ರಿಂದ 15/12/2021 |
| ರೂಪಣಾತ್ಮಕ ಮೌಲ್ಯಮಾಪನ-4 (2 ಚಟುವಟಿಕೆ (15+15 ಅಂಕಗಳು) 1 ಪೆನ್-ಪೇಪರ್ ಟೆಸ್ಟ್ (20 ಅಂಕಗಳು) ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು) | | 27/01/2022 ರಿಂದ 29/01/2022 |
| **ಆಂತರಿಕ ಮೌಲ್ಯಮಾಪನ:** 9 ಮತ್ತು 10 ನೇ ತರಗತಿಗಳಿಗೆ 50 ಅಂಕಗಳಿಗೆ ನಡೆಸಿರುವ ಪ್ರತಿ ರೂಪಣಾತ್ಮಕ ಮೌಲ್ಯಮಾಪನವನ್ನು ಒಳಗೊಂಡಂತೆ ಒಟ್ಟು 4 ರೂಪಣಾತ್ಮಕ ಮೌಲ್ಯಮಾಪನಗಳ ಒಟ್ಟು 200 ಅಂಕಗಳ ಸರಾಸರಿಯನ್ನು 20 ಅಂಕಗಳಿಗೆ ಪರಿವರ್ತಿಸಿ ಆಂತ್ತರಿಕ ಮೌಲ್ಯಮಾಪನಕ್ಕೆ ಪರಗಣಿಸುವುದು. | 20 | |
| 9 ನೇ ತರಗತಿಗೆ<br>ಸಂಕಲನಾತ್ಮಕ ಮೌಲ್ಯಮಾಪನಕ್ಕಾಗಿ (ಅಂತಿಮ ವಾರ್ಷಿಕ ಪರೀಕ್ಷೆ) 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುವುದು.<br>10 ನೇ ತರಗತಿಗೆ<br>ಪೂರ್ವಸಿದ್ಧತಾ ಪರೀಕ್ಷೆ (80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ಮಂಡಳಿ ನಿಗದಿ ಪಡಿಸಿದ ದಿನಾಂಕದಂದು ನಡೆಸುವುದು) | 80 | 11/04/2022 ರಿಂದ 20/04/2022 |
| ಫಲಿತಾಂಶ ಪ್ರಕಟಣೆ ಒಟ್ಟು | 100 ಅಂಕಗಳಿಗೆ | 9ನೇ ತರಗತಿಗೆ ದಿನಾಂಕ 30/04/2022 ರಂದು ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಡಿ ಫಲಿತಾಂಶ ಪ್ರಕಟಿಸುವುದು. |

**ಸೂಚನೆಗಳು:**

1. ಕೋವಿಡ್-19ರ ಪ್ರತಿಕೂಲ ಸನ್ನಿವೇಶದ ಹಿನ್ನೆಲೆಯಲ್ಲಿ ಶಾಲೆಗಳನ್ನು ಭೌತಿಕವಾಗಿ ಪ್ರಾರಂಭಿಸಲು ಪರಿಸ್ಥಿತಿ ಸಹಕಾರಿ ಆಗಿದ್ದಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪರ್ಯಾಯ ಮಾರ್ಗಗಳ (ದೂರದರ್ಶನ, ಸಂವೇದ, ರೇಡಿಯೋ ಕಾರ್ಯಕ್ರಮ, ಆನ್‌ಲೈನ್ ತರಗತಿಗಳು, ದೂರವಾಣಿ ಮೂಲಕ ಸಂಪರ್ಕ ಮತ್ತು ಇತರೆ ಆಫ್‌ಲೈನ್ ಮಾರ್ಗಗಳ) ಮುಖಾಂತರ ಚಾಲನಗೊಳಿಸುವುದರ ಮೂಲಕ ಮಕ್ಕಳು ಕಲಿಕೆಯಲ್ಲಿ ಪಾಲ್ಗೊಳ್ಳಲು ಶಾಲಾ ಹಂತದಲ್ಲಿ ಕ್ರಮವಹಿಸುವುದು. ಶಾಲೆಯು ಮೌಲ್ಯಾಂಕನ ಕಾರ್ಯದ ನಿರಂತರತೆಯನ್ನು ಕಾಯ್ದುಕೊಳ್ಳತಕ್ಕದ್ದು. ಶಾಲೆಯು ತನ್ನ ವ್ಯಾಪ್ತಿಯ ಯಾವುದೇ ಮಗುವನ್ನು ಶಿಕ್ಷಣದಿಂದ ವಂಚಿತರನ್ನಾಗಿಸಬಾರದು.
2. ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಮೌಲ್ಯಾಂಕನ ಕಾರ್ಯವನ್ನು ನಿರ್ವಹಿಸಿ ಸಾಂದರ್ಭಿಕವಾಗಿ ಸೃಜನೆಯಾಗುವ ಅಗತ್ಯ ದಾಖಲಾತಿಗಳನ್ನು ಮಕ್ಕಳ ಕೃತಿ ಸಂಪುಟದಲ್ಲಿ ಸಂಗ್ರಹಿಸಿ ಇಡುವುದು. ಉದಾಹರಣೆಗೆ: ಶಿಕ್ಷಕರು ನೀಡುವ ಪ್ರಶ್ನೆ ಪತ್ರಿಕೆ ಮತ್ತು ಮಕ್ಕಳು ಉತ್ತರಿಸಿದ ಆನ್‌ಲೈನ್ ಅಂಕಗಳು ಅಥವಾ ಅಪ್‌ಲೋಡ್‌ನಲ್ಲಿ ಬರೆದು ಕಳುಹಿಸಿದ ಉತ್ತರ ಪತ್ರಿಕೆಗಳ ಸಾಫ್ಟ್/ಹಾರ್ಡ್ ಪ್ರತಿಗಳನ್ನು ಸಂಗ್ರಹಿಸಿ ಇಡುವುದು.
3. ಮೇಲೆ ನಿಗದಿಪಡಿಸಿದ ಸಮಯದಲ್ಲಿ ಮೌಲ್ಯಾಂಕನ ಚಟುವಟಿಕೆಗಳನ್ನು ಕೈಗೊಳ್ಳುವುದು. ಯಾವುದೇ ಕಾರಣದಿಂದ ಮಗು ಆ ಸಮಯಕ್ಕೆ ಅಲಭ್ಯವಾದಲ್ಲಿ ಸಾಂದರ್ಭಿಕವಾಗಿ ನಡೆಸಿ ಮಕ್ಕಳ ಕೃತಿ ಸಂಪುಟದಲ್ಲಿ ದಾಖಲಿಸಿರುವ ಚಟುವಟಿಕೆಗಳೊಂದಿಗೆ ಸಂಯೋಜನೆ ಮಾಡಿಕೊಂಡು ಆ ಮಗುವಿಗೆ ಮೌಲ್ಯಾಂಕನ ನಡೆಸುವುದು.
4. ವೈಯಕ್ತಿಕ ಅಂಕವಹಿ ಹಾಗೂ ಕ್ರೋಢೀಕೃತ ಅಂಕವಹಿ ಶಿಕ್ಷಕರು ನಿರ್ವಹಿಸುವುದು.
5. ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಮಾಪನ ಕೈಗೊಳ್ಳುವ ಸಂದರ್ಭದಲ್ಲಿ ಲಿಖಿತ ಪರೀಕ್ಷೆಯನ್ನು ಕೈಗೊಳ್ಳುವಾಗ ಕೋವಿಡ್-19ರ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ನೀಡಿ ಉತ್ತರ ಪತ್ರಿಕೆಗಳನ್ನು ಪಡೆದು ಮೌಲ್ಯಮಾಪನ ಮಾಡಿ ಅಂಕಗಳನ್ನು ದಾಖಲಿಸಿಕೊಳ್ಳುವುದು.
6. ಭಾಗ-ಬಿ ಯಲ್ಲಿನ ವಿಷಯದಲ್ಲಿ ಕೋವಿಡ್-19ರ ಮಾರ್ಗಸೂಚಿ ಅನ್ವಯ ಸುರಕ್ಷಿತ ಕ್ರಮವನ್ನು ಅನುಸರಿಸಿ ಲಿಖಿತ/ ಪ್ರಾಯೋಗಿಕ ಚಟುವಟಿಕೆಗಳನ್ನು ಕೈಗೊಳ್ಳುವುದು. ಇದರ ಕುರಿತು ವಿವರವಾದ ಸುತ್ತೋಲೆಯನ್ನು ನಂತರ ನೀಡಲಾಗುವುದು.
7. 1 ರಿಂದ 3ನೇ ತರಗತಿಗಳ ನಲಿಕಲಿ ಘಟಕಗಳಲ್ಲಿ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಸಮಗ್ರ ಶಿಕ್ಷಣ ಕರ್ನಾಟಕದ ನಲಿಕಲಿ ಕೋಶದ ವತಿಯಿಂದ ನೀಡಿದ ಆದೇಶಗಳಂತೆ ಕ್ರಮವಹಿಸುವುದು.
8. ಎಲ್ಲಾ ಶಿಕ್ಷಕರು ನಿರ್ವಹಿಸಿದ ವೈಯಕ್ತಿಕ ಅಂಕವಹಿಯನ್ನು ಶಾಲಾ ಮುಖ್ಯ ಶಿಕ್ಷಕರು ಪರಿಶೀಲಿಸುವುದು. ಶಾಲಾ ಹಂತದಲ್ಲಿ ಕ್ರೋಢೀಕೃತ ಅಂಕವಹಿ ಕಾಲಕಾಲಕ್ಕೆ ನಿರ್ವಹಣೆಯಾಗುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
9. 1 ರಿಂದ 10ನೇ ತರಗತಿಗಳಿಗೆ ಸಂಬಂಧಿಸಿದಂತೆ ರೂಪಣಾತ್ಮಕ ಮೌಲ್ಯಮಾಪನ ನಡೆಸುವಾಗ (ಆಂತರಿಕ ಮೌಲ್ಯಮಾಪನ) ಕೋವಿಡ್ ಹಿನ್ನೆಲೆಯಲ್ಲಿ ಮಕ್ಕಳ ಗೃಹಪಾಠಗಳು, ಅಭ್ಯಾಸ ಹಾಳೆಗಳು, ಇತರೆ ಆನ್‌ಲೈನ್ ಅಥವಾ ಆಫ್‌ಲೈನ್ ಚಟುವಟಿಕೆಗಳನ್ನು ಪರಿಗಣಿಸುವುದು. ವಿದ್ಯಾರ್ಥಿಗಳಿಗೆ ನೀಡುವ ಚಟುವಟಿಕೆಗಳು ಸರಳವಾಗಿದ್ದು ಮಕ್ಕಳು ಸ್ವಯಂ ಪ್ರೇರಿತರಾಗಿ ಚಟುವಟಿಕೆಗಳನ್ನು ನಿರ್ವಹಿಸುವಂತೆ ಹಾಗೂ ಪೋಷಕರಿಗೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ನೋಡಿಕೊಳ್ಳುವುದು.
10. ಆಫ್‌ಲೈನ್ ವಿಧಾನದಲ್ಲಿ ರೂಪಣಾತ್ಮಕ ಚಟುವಟಿಕೆಗಳನ್ನು ನಡೆಸುವಾಗ ಕಡ್ಡಾಯವಾಗಿ ಕೋವಿಡ್ ಸಂಬಂಧಿತ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವುದು. **"ಕನಿಷ್ಠ ದಾಖಲೆ ಗರಿಷ್ಠ ಕಲಿಕೆ"** ಯನ್ನು ಮನದಲ್ಲಿಟ್ಟುಕೊಂಡು ಕಲಿಕೆಗೆ ಪೂರಕವಾಗಿ ರೂಪಣಾತ್ಮಕ ಚಟುವಟಿಕೆಗಳನ್ನು ನಡೆಸಿ ಮಕ್ಕಳಲ್ಲಿ ಕಲಿಕೆಯಾಗಿರುವುದನ್ನು ಖಾತರಿ ಪಡಿಸಿಕೊಳ್ಳುವುದು. ಕೋವಿಡ್‌ನ ಪ್ರತಿಕೂಲ ಸಂದರ್ಭದಲ್ಲಿ ಆನ್‌ಲೈನ್ ವಿಧಾನದಲ್ಲಿ ಕಲಿಕೆಗೆ ತೊಡಗಿಸಿಕೊಳ್ಳಲು ಸಾಧ್ಯವಾಗದ ಮಕ್ಕಳೊಂದಿಗೆ ಶಿಕ್ಷಕರು ನಿರಂತರ ದೂರವಾಣಿ ಸಂಪರ್ಕದಲ್ಲಿದ್ದುಕಲಿಕೆಗೆ ಸಲಹೆ ಮಾರ್ಗದರ್ಶನ ನೀಡಲು ಗರಿಷ್ಠ ಪ್ರಯತ್ನಿಸುವುದು. ಘಟಕವಾರು ಅಭ್ಯಾಸದ ಹಾಳೆಗಳನ್ನು ತಯಾರಿಸಿ ಅಂತಹ ಮಕ್ಕಳಿಗೆ ಸ್ಥಳೀಯ ಅವಕಾಶ ಮತ್ತು ಮಾರ್ಗಗಳನ್ನಾಧರಿಸಿ ಹಂಚಿಕೆ ಮಾಡಿ ಕಲಿಕೆ ನಡೆಸುವುದು.
11. ಶಾಲೆಯ ಮುಖ್ಯ ಶಿಕ್ಷಕರು ಮತ್ತು ಎಲ್ಲಾ ಶಿಕ್ಷಕರೂ ಮಕ್ಕಳನ್ನು ಹಂಚಿಕೆ ಮಾಡಿಕೊಂಡು, ಶೈಕ್ಷಣಿಕವಾಗಿ ದತ್ತು ಪಡೆದು, ಮಕ್ಕಳ ಕಲಿಕೆಯಲ್ಲಿ ತೊಡಗಿಕೊಂಡಿರುವ ಬಗ್ಗೆ ನಿರಂತರ ಗಮನ ನೀಡುತ್ತಾ, ಎಲ್ಲಾ ವಿಷಯಗಳ ಕಲಿಕೆಗೆ ಸಂಬಂಧಿಸಿದಂತೆ ಸಹದ್ಯೋಗಿಗಳೊಂದಿಗೆ ಆಗಾಗ್ಗೆ ಚರ್ಚಿಸಿ ಮಕ್ಕಳಿಗೆ ಅಗತ್ಯ ನೆರವು ನೀಡುವುದು.
12. **ವೇಳಾಪಟ್ಟಿಯಂತೆ ಮೌಲ್ಯಾಂಕನ ಪೂರ್ಣಗೊಂಡ 5 ದಿನಗಳ ಒಳಗೆ ಮಕ್ಕಳ ಪ್ರಗತಿಯನ್ನು ಎಸ್.ಎ.ಟಿ.ಎಸ್‌ನಲ್ಲಿ ಕಡ್ಡಾಯವಾಗಿ ನಮೂದಿಸುವುದು.** ಬ್ಲಾಕ್ ಹಂತದಲ್ಲಿ ಸಿ.ಆರ್.ಪಿ, ಬಿ.ಆರ್.ಪಿ, ಇ.ಸಿ.ಓ, ಬಿ.ಐ.ಇ.ಆರ್.ಟಿ, ಬಿ.ಆರ್.ಸಿ ಕ್ಲಸ್ಟರ್‌ಗಳನ್ನು ಹಂಚಿಕೆ ಮಾಡಿಕೊಂಡು ಎಸ್.ಎ.ಟಿ.ಎಸ್‌ನಲ್ಲಿ ಪ್ರತಿ ಶಾಲೆಯ ಮೌಲ್ಯಾಂಕನ ದಾಖಲಿಸಿರುವುದನ್ನು ಖಾತ್ರಿ ಪಡಿಸಿಕೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ಮಾಡುವುದು.

ಇದೆ ರೀತಿ ಜಿಲ್ಲಾಹಂತದಲ್ಲಿ ಉಪನಿರ್ದೇಶಕರು (ಅಡಳಿತ) ರವರ ಕಛೇರಿಯ ಶಿಕ್ಷಣಾಧಿಕಾರಿಗಳು, ಡಿ.ವೈ.ಪಿ.ಸಿ, ಎ.ಪಿ.ಸಿ ರವರು, ವಿಷಯ ಪರಿವೀಕ್ಷಕರು, ಡಯಟ್‌ನ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು, ಬ್ಲಾಕ್‌ಗಳನ್ನು ಹಂಚಿಕೆ ಮಾಡಿಕೊಂಡು ಪ್ರತಿ ಮಾಹೆ ಸಭೆಯಲ್ಲಿ ಎಸ್.ಎ.ಟಿ.ಎಸ್‌ನಲ್ಲಿ ಪ್ರತಿ ಶಾಲೆಯ ಮೌಲ್ಯಾಂಕನ ದಾಖಲಾಗಿರುವುದನ್ನು ಪರಿಶೀಲಿಸಿ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ವರದಿ ಮಾಡುವುದು.

**13. ಮೌಲ್ಯಮಾಪನ ಪ್ರಕ್ರಿಯೆ ಮಾಹಿತಿಯನ್ನು ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಅಳವಡಿಸಿ ಅನುಪಾಲನೆ ಮಾಡುತ್ತಿರುವ ಕುರಿತು ಪ್ರತಿ ತಿಂಗಳ ಕೊನೆಯ ವಾರದಲ್ಲಿ ಆಯುಕ್ತರ ನೇತೃತ್ವದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುವುದು.**

**ಸೂಚನೆ: ಸದರೀ ಮೌಲಾಂಕನ ಪದ್ಧತಿಯನ್ನು ಕೇವಲ 2021-22 ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ರೂಪಿಸಲಾಗಿದೆ ಹಾಗೂ ಕೋವಿಡ್ -19 ಮಹಾಮಾರಿ ಹರಡುವ ಸನ್ನಿವೇಶವನ್ನು ಗಮನದಲ್ಲಿರಿಸಿ ಕಾಲಕಾಲಕ್ಕೆ ಹೊರಡಿಸುವ ಸೂಚನೆಗಳನ್ನು ಪಾಲಿಸುವುದು.**

ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷೆಗಳನ್ನು ಮತ್ತು ಮೌಲ್ಯಾಂಕನ ಕಾರ್ಯವನ್ನು ಕೈಗೊಳ್ಳಲು ಸೂಚಿಸಿದೆ.

ಅನ್ಬುಕುಮಾರ್, ಭಾ.ಆ.ಸೇ,
ಆಯುಕ್ತರು, ಸಾ ಶಿ ಇಲಾಖೆ.
ಬೆಂಗಳೂರು.

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:-

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮಾಹಿತಿಗಾಗಿ.
6. ಅಪರ ಆಯುಕ್ತರು, ಸಾ.ಶಿ.ಇ, ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ, ಸಾ.ಶಿ.ಇ ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.
7. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅನುಪಲನೆಗಾಗಿ.
8. ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
9. ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
10. ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
11. ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
12. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
13. ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
14. ಕಛೇರಿ ಪ್ರತಿ.